ಓ.ಎಸ್. ನಂಬರ:-113 /2023

ಡಿ.ಡಬ್ಲೂ-:-1 : ಮಡಿವಾಳಪ್ಪ ತಂದೆ ಶರಣಪ್ಪ ಹೂಗಾರ

ದಿನಾಂಕ:- 23-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ *ಪಾಟೀ ಸವಾಲು : ಶ್ರೀ ಆರ್ ಕೆ ವಕೀಲರಿಂದ :-*

ನನಗೆ ಕನ್ನಡ ಓದಲು ಬರುತ್ತದೆ ಆದರೆ ಇಂಗ್ಲೀಷ್ ಬರುವುದಿಲ್ಲ. ಶಂಕರಪ್ಪರವರ ಮರಣ ಪ್ರಮಾಣ ಪತ್ರ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಶಂಕರಪ್ಪರವರು ದಿನಾಂಕ 14-09-2017 ರಂದು ಮೃತರಾಗಿರುತ್ತಾರೆ. ನಾನು ಹಾಜರುಪಡಿಸಿದ ನಿಡಿ-೧೩ ರ ಮೃತ್ಯು ಪತ್ರ ಯಾವ ದಿನಾಂಕದಂದು ನೋಂದಣಿಯಾಗಿರುತ್ತದೆ ಎಂದು ಅದನ್ನು ನೋಡಿ ಹೇಳಬಹುದೆ ಎಂದರೆ ಸಾಕ್ಷಿಯು ಅದನ್ನು ನೀವೆ ನೋಡಿ ತಿಳಿದುಕೊಳ್ಳಬಹುದು ಎನ್ನುತ್ತಾರೆ. ಮೃತ್ಯು ಪತ್ರ ಯಾವ ವರ್ಷ ಮತ್ತು ದಿನಾಂಕದಂದು ಆಗಿದೆ ಎಂದು ನನಗೆ ಗೊತ್ತಿಲ್ಲ. ದಿನಾಂಕ 14-09-2017 ರಂದು ಶಂಕರಪ್ಪರವರು ಮೃತರಾಗಿದ್ದು, ಮೃತ್ಯು ಪತ್ರ ದಿನಾಂಕ 26-09-2017 ರಂದು ನೋಂದಣಿಯಾದ ಕುರಿತು ನಿಡಿ-೧೩ ರಲ್ಲಿ ನಮೂದು ಇದೆ ಎಂದರೆ ಸಾಕ್ಷಿಯು ಅದಕ್ಕೆ ಉತ್ತರವನ್ನು ಹೇಳದೆ ಅದು ಮುಚ್ಚಿದ ವೀಲ್ ಆಗಿತ್ತು ಎನ್ನುತ್ತಾರೆ. ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿ ಮಾಡಿ, ಮುಚ್ಚಿದ ವೀಲ್ ಮಾಡಿ ಇಡಲಾಗಿತ್ತು. ನಾನು ಶಂಕರಪ್ಪರವರ ಟೊಂಕದಲ್ಲಿದ್ದ ಚೀಟಿಯನ್ನು ತೆಗೆದುಕೊಂಡು ನೋಡಿ

ಉಪನೋಂದಣಾಧಿಕಾರಿಗಳ ಕಛೇರಿಗೆ ನಾನೆ ಹೋಗಿದ್ದೆ. ಉಪನೋಂದಣಾಧಿಕಾರಿಗಳ ಕಛೆರಿಗೆ ನಾನು ಒಬ್ಬನೆ ಹೋಗಿದ್ದೆ. ನಾನು ಮರಣ ಪ್ರಮಾಣ ಪತ್ರ ಮತ್ತು ಮೃತ್ಯುಪತ್ರ ನೋಂದಣಿ ಮಾಡಿದ ರಶೀದಿ ತೋರಿಸಿರುತ್ತೇನೆ. ಉಪನೋಂದಣಾಧಿಕಾರಿಗಳು ಇಬ್ಬರು ಪಂಚರ ಸಮಕ್ಷಮ ಮೃತ್ಯುಪತ್ರವನ್ನು ತೆರೆದು ನೋಡಿರುತ್ತಾರೆ. ಪಂಚರಾಗಿ ಪ್ರಭುಲಿಂಗ ತಂದೆ ಕಲ್ಯಾಣಿ ಗೊಬ್ಬೂರ ಸಾ.ಅವಲಳ್ಳಿ ಮತ್ತು ಬೀರಪ್ಪ ತಂದೆ ಹೊನ್ನಂಗಿ ಜೋಗುರ ಸಾ.ಅವಲಳ್ಳಿರವರು ಇದ್ದರು.

೨. ಉಪನೋಂದಣಾಧಿಕಾರಿಗಳು ಹೇಳಿದ ನಂತರ ನಾನು ಪಂಚರನ್ನು ಕರೆದುಕೊಂಡು ಹೋಗಿರುತ್ತೇನೆ. ಶಂಕರಪ್ಪರವರು ಮೃತರಾದ ನಂತರ ನಾನು ಉಪನೋಂದಣಾಧಿಕಾರಿಗಳ ಕಛೇರಿಗೆ ಹೋಗಿದ್ದೆ, ಅದು ಯಾವ ದಿನಾಂಕ ಆಗಿತ್ತು ಎಂದು ನನಗೆ ಹೇಳಲು ನೆನಪಿಲ್ಲ. ನಾನು ಪಂಚರನ್ನು ದಿನಾಂಕ 26-09-2017 ರಂದು ಕರೆದುಕೊಂಡು ಹೋಗಿದ್ದೆ. ನಾನು ಉಪನೋಂದಣಾಧಿಕಾರಿಗಳ ಕಛೇರಿಗೆ ಹೋದ ಕುರಿತು ಮೇಲೆ ಹೇಳಿದಂತೆ ಹೋಗದೆ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಚ್ಚಿದ ಲಕೋಟೆ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿಯೆ ಇತ್ತು. ಅದು ಎಷ್ಟು ವರ್ಷ ಅಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ನಾನು ಮೇಲೆ ಹೇಳಿದ ವಿಚಾರಗಳನ್ನು ನನ್ನ ಲಿಖಿತ ಹೇಳಿಕೆಯಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ಬಗ್ಗೆ ನನಗೆ ಗೊತ್ತಿಲ್ಲ.

೩. ಮೃತ್ಯು ಪತ್ರ ಮಾಡುವಾಗ ಶಂಕರಪ್ಪರವರಿಗೆ ಎಷ್ಟು ವರ್ಷ ವಯಸ್ಸು ಇತ್ತು ಎಂದು ನನಗೆ ಗೊತ್ತಿಲ್ಲ. ಮೃತ್ಯಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತು. ಶಂಕರಪ್ಪರವರು ತಾನು ಆರೋಗ್ಯ ಸ್ಥಿತಿಯಲ್ಲಿರುವಾಗ ಮೃತ್ಯು ಪತ್ರ ಬರೆದಿರುವುದಾಗಿ ಅದರಲ್ಲಿ ತಿಳಿಸಿರುತ್ತಾರೆ. ಮೃತ್ಯಪತ್ರದಲ್ಲಿ ಶಂಕರಪ್ಪರವರು ತನ್ನ ಆರೋಗ್ಯದಲ್ಲಿ ತೊಂದರೆಯಾಗಿದೆ ತಾನು ಬಹಳ ವರ್ಷ ಬದುಕುವುದಿಲ್ಲ ಎಂದು ಬರೆಸಿದ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಯು ಅದು ಅವರಿಗೆ ಗೊತ್ತು ಎನ್ನು ತ್ತಾರೆ. ಶಂಕರಪ್ಪರವರಿಗ ಆರೋಗ್ಯದಲ್ಲಿ ಏನು ತೊಂದರೆ ಇತ್ತು ಎಂದು ನನಗೆ ಗೊತ್ತಿಲ್ಲ, ಅದು ಅವರಿಗೆ ಗೊತ್ತು.

೪. ದಾವಾ ಜಮೀನು ಒಟ್ಟು ಕುಟುಂಬದ ಆಸ್ತಿಯಾಗಿದೆ ಎಂದರೆ ಸರಿಯಲ್ಲ. ಲಕ್ಷ್ಮಣ ಮತ್ತು ಬಸಣ್ಣ ಮತ್ತು ಶಂಕರಪ್ಪ ಸೇರಿಕೊಂಡು ದುಡಿದು, ಶಂಕರಪ್ಪರವರ ಹೆಸರಿನಲ್ಲಿ ದಾವಾ ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಜಮೀನು ಖರೀದಿ ಮಾಡುವಾಗ ಶಂಕರಪ್ಪರವರ ತಂದೆಯಾದ ಗುರಪ್ಪ ಜೀವಿತಾ ಇರಲಿಲ್ಲ. ಗುರಪ್ಪರವರು ಯಾವಾಗ ಮೃತರಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ೧೯೭೭ ರಲ್ಲಿ ಖರೀದಿ ಪತ್ರ ಆಗುವಾಗ ಲಕ್ಷ್ಮಣ, ಬಸಣ್ಣ ಮತ್ತು ಶಂಕರಪ್ಪರವರು ಒಂದೆ ಮನೆಯಲ್ಲಿ ಒಟ್ಟಿಗೆ ವಾಸ ಇದ್ದರು ಎಂದರೆ ಸರಿಯಲ್ಲ. ಲಕ್ಷ್ಮಣ, ಬಸಣ್ಣ ಮತ್ತು ಶಂಕರಪ್ಪರವರ ನಡುವೆ ೭ ಎಕರೆ ದಾವಾ ಜಮೀನಿನಲ್ಲಿ ಯಾವುದೆ ವಿಭಾಗ ಆಗಿಲ್ಲ ಎಂದರೆ ಸಾಕ್ಷಿಯು ಜಮೀನು ಶಂಕರ ಖರೀದಿ ಮಾಡಿರುವುದರಿಂದ ವಿಭಾಗ ಹೇಗೆ ಆಗುತ್ತದೆ ಎನ್ನು ತ್ತಾರೆ.

೫. ಲಕ್ಷ್ಮಣ ಮತ್ತು ಬಸಣ್ಣರವರಿಗೂ ಕೂಡಾ ದಾವಾ ಜಮೀನಿನಲ್ಲಿ ಪಾಲು ಇದೆ ಎಂದರೆ ಸರಿಯಲ್ಲ. ಅವರಿಗೂ ಕೂಡಾ ಪಾಲು ಇದ್ದರೂ ಸಹ ದಾವಾ ಜಮೀನು ಶಂಕರಪ್ಪರವರು ಸ್ವತ: ಖರೀದಿಸಿದ ಜಮೀನು ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನು ಒಟ್ಟು ಕುಟುಂಬದ ಆಸ್ತಿಯಾಗಿರುವುದರಿಂದ ಮೃತ್ಯಪತ್ರ ವಾದಿಯರಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.